## ಪಾಠ 4

## ಸಭೆ:

# ಅದರ ಸ್ಥಾಪನೆ (1)

**ಸಮಯಕ್ಕೆ ಸಂಬಂಧಿಸಿ ವಿವಿಧ ವಾದಗಳು**

1. **ಅದರ ಸ್ಥಾಪನೆಯ ಸಮಯಕ್ಕೆ ವಿರೋಧವಾಗಿರುವ ಸ್ಥಾನಗಳಲ್ಲಿ ಕೆಲವನ್ನು ಹೇಳಿರಿ.**
   "ಏದೆನಿನಲ್ಲಿ" ಎಂದು ಕೆಲವರು ಹೇಳುವರು; ಇತರರು "ಅಬ್ರಹಾಮನ ದಿನಗಳಲ್ಲಿ" ಎಂದು; ಬೇರೆಯವರು "ಸ್ನಾನಿಕನಾದ ಯೋಹಾನನ ದಿನಗಳಲ್ಲಿ" ಎಂದೂ; ಇತರರು, "ಕ್ರಿಸ್ತನ ವೈಯಕ್ತಿಕ ಸೇವೆಯ ಸಮಯದಲ್ಲಿ" ಎಂದು ಹೇಳುವರು.
2. **ಆದರೆ ಬೈಬಲಿನ ಸ್ಥಾನ ಯಾವುದು?**
   ಕ್ರಿಸ್ತನ ಪುನರುತ್ಥಾನದ ನಂತರದ ಮೊದಲನೆಯ ಪಂಚಾಶತ್ತಮ ದಿನ.

## ರುಜುವಾತು

**ದಾವೀದನ ಸಂತತಿ ಆತನ ಮನೆಯನ್ನು ಕಟ್ಟುವುದು (2 ಸಮುವೇಲ 7:12-17; 1 ಪೂರ್ವಕಾಲವೃತ್ತಾಂತ 17:11-15)**

1. **ಈ ಉಲ್ಲೇಖನಗಳನ್ನು ಓದಿರಿ ಮತ್ತು ಈ ಕೆಳಗೆ ಪಟ್ಟಿಮಾಡಿದ ಭಾಗಗಳೊಂದಿಗೆ ಅವನ್ನು ಪರೀಕ್ಷಿಸಿರಿ.**
2. **ಅಪೊಸ್ತಲರ ಕೃತ್ಯಗಳಲ್ಲಿಯ ನೆರವೇರಿದ ಉಲ್ಲೇಖನಗಳನ್ನು ಓದಿರಿ, ಮತ್ತು ನಾತನನ ಪ್ರಾವಾದನೆಯೊಂದಿಗೆ ಅವು ಹೊಂದಿಕೊಳ್ಳುವವೋ ಎಂಬುದನ್ನು ನೋಡಿರಿ.**

| ಪ್ರವಾದನೆ ................................ | ಮತ್ತು...... | ನೆರವೇರುವಿಕೆ (ಅಪೊಸ್ತಲರ ಕೃತ್ಯಗಳು 2:29-35) |
|---|---|---|
| 1—ದಾವೀದನ ಸಂತಾನ ಕಟ್ಟಲಿಕ್ಕೆ | | 1—ಕ್ರಿಸ್ತನು, ದಾವೀದನ ಸಂತಾನ, 2:30 |
| 2—ಆತನ ಮರಣದ ನಂತರ | | 2—ಆತನ ಮರಣದ ನಂತರ, 2:29 |
| 3—ಆತನ ಸಿಂಹಾಸನ ಸ್ಥಾಪಿಸಲು | **ಪಂಚಾಶತ್ತಮ ದಿನ** | 3—ಸಿಂಹಾಸನದ ಮೇಲೆ ಮಹಿಮೆ ಪಡಿಸಲ್ಪಟ್ಟಿದ್ದು, 2:30-35 |
| 4—ನನ್ನ ಮನೆಯನ್ನು ಕಟ್ಟು | | 4—ಕಟ್ಟಿದ ಮನೆ, 2:30, 47 |

3. **ಅಪೊಸ್ತಲರ ಕೃತ್ಯಗಳು 2ರ ಘಟನೆಗಳು ಯಾವಾಗ ಸಂಭವಿಸಿದವು (ಅಪೊಸ್ತಲರ ಕೃತ್ಯಗಳು 2:1)?**

**ದಾವೀದನ ಸಿಂಹಾಸನ ಕ್ರಿಸ್ತನ ಸಿಂಹಾಸನವಾಗಿರುವುದು (ಲೂಕ 1:31-33)**

1. **"ದಾವೀದ" ಎಂಬುದರ ಕೆಳಗಿನ ಉಲ್ಲೇಖಗಳನ್ನು ಓದಿರಿ ಮತ್ತು ಆಮೇಲೆ "ಕ್ರಿಸ್ತ" ಎಂಬುದರ ಕೆಳಗಿನವುಗಳನ್ನು ಓದಿರಿ. "ಕ್ರಿಸ್ತ" ಎಂಬುದರ ಕೆಳಗಿನ ಪ್ರತಿಯೊಂದು ಭಾಗವನ್ನು ಪರೀಕ್ಷಿಸಿರಿ. ಮತ್ತು ಅದು "ದಾವೀದ" ಎಂಬುದರ ಕೆಳಗಿನವುಗಳೊಂದಿಗೆ ಹೊಂದಿಕೊಳ್ಳುತ್ತವೆಯೋ ಮತ್ತು ನೆರವೇರಿಸುತ್ತವೆಯೋ ಎಂಬುದನ್ನು ನೋಡಿರಿ.**

**ದಾವೀದನ.....................................ಮತ್ತು.....ಕ್ರಿಸ್ತನ (ಅಪೊಸ್ತಲರ ಕೃತ್ಯಗಳು 2)**

| | | |
|---|---|---|
| 1—ದಾವೀದನ ಸಿಂಹಾಸನ, 1 ಅರಸುಗಳು 2:12 | | 1—ದಾವೀದನ ಸಿಂಹಾಸನ, 2:30 |
| 2—ಕರ್ತನ ಸಿಂಹಾಸನ, 1 ಪೂರ್ವಕಾಲವೃತ್ತಾಂತ 29:23 | | 2—ಕರ್ತನ ಸಿಂಹಾಸನ, 2:34, 35 |
| 3—ತನ್ನ ಸಿಂಹಾಸನದ ಮೇಲೆ ಇರಲು, ಯೆಶಾಯ 9:7 | | 3—ಸಿಂಹಾಸನದ ಮೇಲೆ, ಇರಿಸಲ್ಪಟ್ಟನು 2:30 |
| 4—ಅದನ್ನು ಸ್ಥಾಪಿಸಲು, ಯೆಶಾಯ 9:7 | **ಪಂಚಾಶತ್ತಮ** | 4—ಅದನ್ನು ಸ್ಥಾಪಿಸಿದನು, 2:30 |
| 5—ಪರಲೋಕದಲ್ಲಿ ಇರಲು, ಕೀರ್ತನೆ 89:35-37 | **ದಿನ** | 5—ದೇವರ ಬಲಗಡೆ, 2:33 |
| 6—ಸಿಂಹಾಸನದ ಮೇಲೆ ಆಳಲು, ಕೀರ್ತನೆ 110:1, 2 | | 6—ಆಳುತ್ತಿರುವನು, 2:34, 35 |
| 7—ಚೀಯೋನಿನಲ್ಲಿ ಆಳ್ವಿಕೆ, ಕೀರ್ತನೆ 110:2 | | 7—ಚೀಯೋನಿನ ಮೇಲೆ ಕಟ್ಟಲ್ಪಟ್ಟ ಸಭೆ |

2. **ದಾವೀದನ ಸಿಂಹಾಸನವು ಯಾರಿಗಿರುವುದು ಮತ್ತು ಅದರ ಮೇಲೆ ಯಾರು ಆಳುವರು (ಲೂಕ 1:31-33)?**
3. **"ಆತನ ಸಿಂಹಾಸನದ ಮೇಲೆ ಕುಳ್ಳಿರಿಸುವನು" ಎಂಬುದರ ಒತ್ತಡ ಯಾವುದು (ಅಪೊಸ್ತಲರ ಕೃತ್ಯಗಳು 2:30)?**
   "Set" ಎಂಬುದು kathizo ಎಂಬ ಗ್ರೀಕ ಪದದಿಂದ ಬರುತ್ತದೆ, ಹಾಗೂ "ಒಬ್ಬನ ಮೇಲೆ ರಾಜ್ಯವನ್ನು ಒಪ್ಪಿಸು, ಅಪೊಸ್ತಲರ ಕೃತ್ಯಗಳು 2:30" ಎಂದರ್ಥವಾಗುತ್ತದೆ (ಥಾಯರ್).
4. **ಆದುದರಿಂದ, ಈ ಮುಂತಿಳಿಸುವಿಕೆಗಳು ಯಾವಾಗ ನೆರವೇರಿದವು (ಅಪೊಸ್ತಲರ ಕೃತ್ಯಗಳು 2:1)?**

## ಸಮಯಕ್ಕೆ ತೋರಿಸುವ ಪ್ರವಾದನೆಗಳು

1. **"ಪ್ರವಾದನೆ"ಯ ಕೆಳಗಿನ ಉಲ್ಲೇಖನಗಳುನ್ನು ಓದಿರಿ. ಆಮೇಲೆ "ನೆರವೇರುವಿಕೆ"ಯ ಕೆಳಗಿನವುಗಳನ್ನು ಓದಿರಿ. ನಿರ್ದಿಷ್ಟವಾದ ನೆರವೇರಿಕೆ ಇರುವುದೊ?**

**ಪ್ರವಾದನೆ (ಯೆಶಾಯ 2:2,3; ಮೀಕ 4:1, 2)........ಮತ್ತು.....ನೆರವೇರಿಸುವಿಕೆ (ಅಪೊಸ್ತಲರ ಕೃತ್ಯಗಳು 2)**

| | | |
|---|---|---|
| 1—ಕೊನೆಯ ದಿನಗಳು | | 1—ಕೊನೆಯ ದಿನಗಳು, 2:17 |
| 2—ಕರ್ತನ ಮನೆಯ ಬೆಟ್ಟ | | 2—ಸಭೆ, 2:47; 1 ತಿಮೊಥೆ 3:15 |
| 3—ಬೆಟ್ಟಗಳ ಮೇಲೆ ಸ್ಥಾಪಿಸಲ್ಪಡುವುದು | | 3—ಬೆಟ್ಟಗಳ ಮೇಲಿನ ಯೆರೂಸಲೇಮ |
| 4—ಕರ್ತನ ವಾಕ್ಯ | **ಪಂಚಾಶತ್ತಮ ದಿನ** | 4—ವಾಕ್ಯ ಮತ್ತು ಯೆರೂಸಲೇಮ, 2:5, 14 |
| 5—ಚೀಯೋನಿನ ಹೊರಗೆ ಧರ್ಮಶಾಸ್ತ್ರ | | 5—ಕ್ಷಮಾಪಣೆಯ ಧರ್ಮಶಾಸ್ತ್ರ, 2:37, 38 |
| 6—ಎಲ್ಲಾ ದೇಶಗಳು | | 6—ಎಲ್ಲಾ ಜನಾಂಗಗಳು 2:5, 36–41 |

2. **ಯೆಶಾಯ ಮತ್ತು ಮೀಕರ ಪ್ರವಾದನೆಗಳು ಎಲ್ಲಿ ನೆರವೇರಿದವು (ಅಪೊಸ್ತಲರ ಕೃತ್ಯಗಳು 2:1)?**
3. **ಈ ಎಲ್ಲಾ ಸಂಗತಿಗಳು ಪ್ರಾರಂಭಿಸಲ್ಪಡಬೇಕೆಂದು ಕ್ರಿಸ್ತನು ಯಾವಾಗ ಮತ್ತು ಎಲ್ಲಿ ಹೇಳಿದನು (ಲೂಕ 24:47-49)?**

## ಯೋಚಿಸಬೇಕಾದ ಸಂಗತಿಗಳು (ಯೆಶಾಯ 2:2, 3)

1. **ಸಭೆಯು ಯೆರೂಸಲೇಮಿನಲ್ಲಿ, ಕೊನೆಯ ದಿನಗಳಲ್ಲಿ ಮತ್ತು ಎಲ್ಲಾ ಜನಾಂಗಗಳಿಗಾಗಿ ಸ್ಥಾಪಿಸಲ್ಪಡ ಬೇಕಾಗಿತ್ತು.**

a. ಸ್ನಾನಿಕನಾದ ಯೋಹಾನನು "ಕೊನೆಯ ದಿನಗಳ" ಬಗ್ಗೆ ಏನನ್ನಾದರು ಹೇಳಿದನೋ? ಇಲ್ಲ. ಯೋಹಾನನು ತನ್ನ ಪ್ರಸಂಗಿಸುವಿಕೆಯನ್ನು ಎಲ್ಲಿ ಮಾಡಿದನು (ಮತ್ತಾಯ 3:1)?
b. ಯಾರ ಬಳಿಗೆ ಕ್ರಿಸ್ತನು ಹೋದನು (ಮತ್ತಾಯ 15:24)? ಯಾರ ಬಳಿಗೆ ಆತನು ಶಿಷ್ಯರನ್ನು ಕಳುಹಿಸಿದನು (ಮತ್ತಾಯ 10:6)?
c. ಎಲ್ಲಾ ಜನಾಂಗಗಳ ಬಳಿಗೆ ಶಿಷ್ಯರು ಯಾವಾಗ ಹೋಗಬೇಕು (ಲೂಕ 24:49ಬಿ)? ಅವರು ಎಲ್ಲಿಂದ ಪ್ರಾರಂಭಿಸಬೇಕು (ಲೂಕ 24:47ಬಿ)?
d. ಯಾವಾಗ ಮತ್ತು ಎಲ್ಲಿ ಯೆಶಾಯನು ಹೇಳಿದ ವಿಷಯಗಳು ಕಾರ್ಯರೂಪಕ್ಕೆ ಬರುವವು (ಅಪೊಸ್ತಲರ ಕೃತ್ಯಗಳು 2:5, 36-41)?

© 2009 Truth for Today